**Spl.C. No. 3/2020.**

ವಿಶೇಷ ನ್ಯಾಯಾಧೀಶರು, ಬಾಗಲಕೋಟ ಇವರ ನ್ಯಾಯಾಲಯದಲ್ಲಿ

ವಿಶೇಷ ಪ್ರಕರಣ ಸಂಖ್ಯೆಃ **3/2020**

| | | | |
|---|---|---|---|
| ಹೆಸರು | : | ಸದಾಶಿವ ಜಿಡ್ಡಿಮನಿ | ಫ್ರಾಸಾ-5 |
| ತಾಯಿಯ ಹೆಸರು | : | ರಾಣವ್ವ | ಚಾಸಾ-5 |
| ವಯಸ್ಸು | : | 44 ವರ್ಷ | |
| ಉದ್ಯೋಗ | : | ಕೂಲಿಕೆಲಸ | |
| ವಾಸಸ್ಥಳ | : | ಶಿರೋಳ, ತಾ. ಮುಧೋಳ | |

ದಿನಾಂಕಃ 04-09-2023 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ</u>

ಆರೋಪಿತರು ಪರಿಚಯ. 16-10-2019 ರಂದು ಸಂಜೆ 6-30 ಗಂಟೆಗೆ ಶಿರೋಳ ಪೊ.ಠಾಣೆಗೆ ಪೋಲೀಸರು ಕರೆಸಿದ್ದರು. ಅಲ್ಲಿ ಪೋಲೀಸರು ಎರಡು ಬಿಳಿ ಎರಡು ನೆಹರೂ ಶರ್ಟ ಅಂಗಿ, ಎರಡು ದೋತರ, ಒಂದು ಕಲ್ಲು, ಗಾಡಿ ನಂಬರ ಪ್ಲೇಟ ಕೆಎ-25 ಟಿ-7149 ಹಾಗೂ ಒಂದು ಕಟ್ಟಿಗೆ ಇದ್ದವು ಅಲ್ಲಿಂದ ನಾನು ಊರಿಗೆ ಹೋದೆನು.

ದಿಃ17-10-2019 ರಂದು 11-30 ಗಂಟೆಗೆ ಕೊಲೆಯಾದ ಜಾಗಕ್ಕೆ ಹೋದಾಗ ಅಲ್ಲಿ ಪೋಲೀಸರು ಕೊಲೆಯಾದ ಜಾಗದಲ್ಲಿ ಮಾರ್ಕ ಮಾಡುತ್ತಿದ್ದರು. ಕೊಲೆಯಾದ ಜಾಗದ ಚಕಬಂದಿ ಪೂರ್ವಕ್ಕೆ-ಶ್ರೀಶೈಲ ಅವರ ಜಮೀನು, ಪಶ್ಚಿಮಕ್ಕೆ - ಶಂಕರ ಇವರ ಜಮೀನು, ಉತ್ತರಕ್ಕೆ- ಕುರಿದಡ್ಡಿಗೆ ಹೋಗುವ ರಸ್ತೆ, ದಕ್ಷಿಣಕ್ಕೆ-ಶಿರೋಳಕ್ಕೆ ಬರುವ ರಸ್ತೆ ಇದ್ದು, ಜಾಗದಲ್ಲಿ 11 ಪೋಟೋ ತೆಗೆದಿದ್ದು, ಈಗ 5 ಪೋಟೋ ನೋಡಿದ್ದು, ಅವುಗಳನ್ನು ಮು.ಮಾ-16 ರಿಂದ 20 ಅಂತಾ ಗುರುತಿಸಲಾಗಿದೆ. ನಿಪಿ-14 ರ ಮೇಲಿನ ಸಹಿಯನ್ನು ನೋಡಿದೆ ಅದನ್ನು ನಿಪಿ-14 ಬಿ ಅಂತಾ ಗುರುತಿಸಲಾಯಿತು. ಸದರಿ ಸಹಿಯನ್ನು ಪೊ.ಠಾಣೆಯಲ್ಲಿ ಮಾಡಿದ್ದೇನೆ.

ನಂತರ ಮದ್ಯಾಹ್ನ 1-30 ಗಂಟೆಗೆ ಠಾಣೆಗೆ ಬಂದೆವು. ಅಲ್ಲಿ ಮೂರು ಜನ ಆರೋಪಿತರು ಇದ್ದರು. ಅಲ್ಲಿ ಪೋಲೀಸರು ಕಾರ ಕೀಲಿ ಮತ್ತು 4 ಮೊಬೈಲಗಳನ್ನು ಜಪ್ತ ಮಾಡಿದರು. ಪಂಚನಾಮೆಗೆ ಠಾಣೆಯಲ್ಲಿ ಸಹಿ ಮಾಡಿದ್ದು, ಅದನ್ನು ಈಗಾಗಲೇ ನಿಪಿ-22 ಅಂತಾ ಗುರುತಿಸಲಾಗಿದೆ. ಸಹಿಯನ್ನು ನಿಪಿ-22 ಬಿ ಅಂತಾ ಗುರುತಿಸಲಾಯಿತು. ನಿಪಿ-16 ರ

ಮೇಲಿನ ಸಹಿಯನ್ನು ನಿಪಿ-16 ಬಿ ಅಂತಾ ಗುರುತಿಸಲಾಯಿತು. ಅದನ್ನು ಘಟನಾ ಜಾಗದಲ್ಲಿ ಮಾಡಿದ್ದೇನೆ.

ನಂತರ ಆರೋಪಿತರನ್ನು ಹಾಗೂ ನನ್ನನ್ನು ಜೀಪಿನಲ್ಲಿ ಕೊಲೆಯಾದ ಜಾಗಕ್ಕೆ ಕರೆದುಕೊಂಡು ಹೋಗಿ 6 ಫೋಟೋ ತೆಗೆದಿದ್ದಾರೆ. 6 ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-25 ರಿಂದ 30 ಅಂತಾ ಗುರುತಿಸಲಾಗಿದೆ. ಡಾಲ್ಮಿಯ ಪ್ಯಾಕ್ಟರಿಗೆ ಸಂಜೆ 5-30 ಗಂಟೆಗೆ ಹೋಗಿ ಅಲ್ಲಿ ಎ ಒನ್ ಡಾಬಾದ ಮುಂದೆ ಒಂದು ಕಾರ ಗಾಡಿ ಪೋರ್ಡ ಪೀಜೋ ಇತ್ತು. ಸದರಿ ಕಾರ ಡ್ರೈವರ ಸೈಡಿನ ಬಾಗಿಲು ಮುರಿದಿತ್ತು. ಮುಂದಿನ ನಂಬರ ಪ್ಲೇಟ ಇರಲಿಲ್ಲ. ಹಿಂದಿನ ನಂಬರ ಪ್ಲೇಟ ಇತ್ತು ಅದರ ನಂ. ಕೆಎ-25 ಟಿ-7149 ಆಗಿತ್ತು. ನಂತರ ಪೋಲೀಸರು ಕಾರನ ಡಿಕ್ಕಿ ಓಪನ ಮಾಡಿದರು. ಅದರಲ್ಲಿ ಎರಡು ತಲವಾರ ಇದ್ದವು. ಮೂರು ಜೊತೆ ಬಟ್ಟೆಗಳು ಇದ್ದವು. ಅಲ್ಲಿ 2 ಫೋಟೋ ತೆಗೆದರು. ಅವುಗಳನ್ನು ನಿಪಿ-29 ಮತ್ತು 30 ಅಂತಾ ಗುರುತಿಸಲಾಗಿದೆ. ಅವುಗಳನ್ನು ನೋಡಿ ಗುರುತಿಸುತ್ತೇನೆ. ನಂತರ ಠಾಣೆಗೆ ಬಂದೆವು. ಅಲ್ಲಿ ಪೋಲೀಸರು ಸಹಿ ಪಡೆದರು. ನಂತರ ಅಲ್ಲಿಂದ ಊರಿಗೆ ಹೋದೆವು. ಮು.ಮಾ-1 ರಿಂದ 14 ನೋಡಿ ಗುರುತಿಸಿದ್ದೇನೆ. ಒಂದು ಕಲ್ಲನ್ನು ಮು.ಮಾ-20 ಅಂತಾ ಗುರುತಿಸಲಾಯಿತು. ಮಲ್ಲಪ್ಪ ಇವನ ಉಡದಾರವನ್ನು ಮು.ಮಾ-21 ಅಂತಾ, ವಿಠ್ಠಲ ಇವನ ಉಡದಾರ ಮು.ಮಾ-22 ಅಂತಾ ಗುರುತಿಸಲಾಯಿತು.

<u>ಪಾಟಿಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಸ್ ಸಿ ಎಚ್ ಅವರಿಂದಃ</u>

ಚಾಸಾ-1 ಮತ್ತು ಮೃತರು ನನ್ನ ಸಂಬಂಧಿಕರು ಅಲ್ಲ. ನಮ್ಮ ಓಣಿಯಲ್ಲಿರುತ್ತಾರೆ . ದಿಃ 16-10-2019 ರಂದು ಸಂಜೆ 5-30 ಗಂಟೆಗೆ ಬಟ್ಟೆ ತೋರಿಸಿದ್ದಾರೆ ಪಂಚನಾಮೆ ಮಾಡಿಲ್ಲ. ಸಹಿ ಪಡೆದಿದ್ದಾರೆ. ಅಲ್ಲಿ ಯಾವುದೇ ಬರವಣಿಗೆಯಾದ ಬಗ್ಗೆ ಗೊತ್ತಿಲ್ಲ.

ದಿಃ 17-10-2019 ರಂದು ಪೋಲೀಸರು ನಾನು ಶಾಲೆಯ ಹತ್ತಿರ ನಿಂತಾಗ ನನ್ನನ್ನು ಠಾಣೆಗೆ ಕರೆದುಕೊಂಡು ಹೋಗಿ ಅಲ್ಲಿಂದ, ಕೊಲೆಯಾದ ಸ್ಥಳ ಕುರಿದಡ್ಡಿಗೆ ಹೋಗುವ ರಸ್ತೆಗೆ ಕರೆದುಕೊಂಡು ಹೋದರು. ಪೋಲೀಸರಿಗೆ ನಾನು ಪಂಚನಾಮೆ ಬರೆಯಲು ನಾನು ಹೇಳಿಲ್ಲ. ಪಂಚನಾಮೆಯಲ್ಲಿ ಬರೆದ ವಿಷಯ ಗೊತ್ತಿಲ್ಲ. ಅಲ್ಲಿಂದ ಯಾದವಾಡ ಡಾಲ್ಮಿಯ ಪ್ಯಾಕ್ಟರಿಗೆ ಹೋದೆವು. ಶಿರೋಳದಿಂದ ಡಾಲ್ಮಿಯಾ ಪ್ಯಾಕ್ಟರಿ 45 ಕಿ.ಮೀ. ದೂರ ಇದೆ. ಅಲ್ಲಿ ಹೋದಾಗ 5-30 ಗಂಟೆಯಾಗಿತ್ತು. ದಿಃ 17-10-2019 ರಂದು 6-30 ಗಂಟೆಯವರೆಗೆ ಅಲ್ಲಿಯೇ ಇದ್ದೆವು. ಅಲ್ಲಿ ಯಾವುದೇ ಬರವಣಿಗೆಯಾಗಿಲ್ಲ. ಆದರೆ ಸಹಿ ಪಡೆದಿದ್ದಾರೆ. ನಾನು ಬರವಣಿಗೆಗೆ ವಿಷಯ

ಹೇಳಿಲ್ಲ ಅದರಲ್ಲಿ ಬರೆದ ವಿಷಯ ಗೊತ್ತಿಲ್ಲ. ಅಕ್ಟೋಬರ ತಿಂಗಳಲ್ಲಿ ಸಾಯಂಕಾಲ 5-30 ಗಂಟೆಗೆ ಕತ್ತಲಾಗುತ್ತದೆ ಎಂದರೆ ನಿಜ. ನಮ್ಮನ್ನು ನಿಲ್ಲಿಸಿ ಪೋಲೀಸರು ಪೋಟೋ ತೆಗೆದಿದ್ದಾರೆ. ನಿಪಿ-27 ಮತ್ತು 28 ಪೋಟೋ ನೋಡಿದೆ ಅದರಲ್ಲಿ ಕತ್ತಲಾದ ಬಗ್ಗೆ ಕಾಣುವುದಿಲ್ಲ. ಬೆಳಕು ಕಾಣುತ್ತದೆ ಎಂದರೆ ನಿಜ.

ಪೋಲೀಸರು ನನ್ನನ್ನು ಠಾಣೆಗೆ ಮತ್ತು ಡಾಲ್ಮಿಯ ಪ್ಯಾಕ್ಟರಿಗೆ ಕರೆಸಿ ಸಹಿ ಪಡೆದರು ಹಾಗೂ ಮು.ಮಾಲುಗಳನ್ನು ಅಮಾನತುಪಡಿಸಿಕೊಂಡರು ಅಂತಾ ಸುಳ್ಳು ಹೇಳುತ್ತೇನೆಂದರೆ ಸರಿಅಲ್ಲ. ಚಾಸಾ-1 ನಮ್ಮ ಊರಿನವರು ಇರುವುದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಅಲ್ಲ. ಮು.ಮಾಲು ನಮ್ಮ ಅನುಕೂಲಕ್ಕೆ ತಕ್ಕಂತೆ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಅಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಅಲ್ಲ. ಮು.ಮಾ-1 ರಿಂದ 14 ಹಾಗೂ ಮು.ಮಾ-21 ಮತ್ತು 22 ಅಮಾನತುಪಡಿಸಿಕೊಂಡಿದ್ದಾರೆಂದು ಸುಳ್ಳು ಹೇಳುತ್ತೇನೆಂದರೆ ಸರಿಅಲ್ಲ.

<u>ಮರುವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

ವಿಶೇಷ ನ್ಯಾಯಾಧೀಶರು, ಬಾಗಲಕೋಟ.

**Spl.C. No. 3/2020.**

ವಿಶೇಷ ನ್ಯಾಯಾಧೀಶರು, ಬಾಗಲಕೋಟ ಇವರ ನ್ಯಾಯಾಲಯದಲ್ಲಿ

ವಿಶೇಷ ಪ್ರಕರಣ ಸಂಖ್ಯೆ: **3/2020**

| | | | |
|---|---|---|---|
| ಹೆಸರು | : | ದುರ್ಗಪ್ಪ ಗಾಡಿನ್ನವರ | ಫ್ರಾಸಾ-4 |
| ತಂದೆಯ ಹೆಸರು | : | ರಾಮಪ್ಪ | ಚಾಸಾ-2 |
| ವಯಸ್ಸು | : | 40 ವರ್ಷ | |
| ಉದ್ಯೋಗ | : | ಕೂಲಿಕೆಲಸ | |
| ವಾಸಸ್ಥಳ | : | ಶಿರೋಳ, ತಾ. ಮುಧೋಳ | |

ದಿನಾಂಕಃ 04-09-2023 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ</u>

ಸರಕಾರಿ ಆಸ್ಪತ್ರೆಯಲ್ಲಿ ಪಂಚನಾಮೆ ಸಹಿಗಾಗಿ ಪೋಲೀಸರು ಕರೆಸಿದ್ದರು. ನ್ಯಾಯಾಲಯದ ಮುಂದಿರುವ ಎರಡೂ ಜನ ಆರೋಪಿತರು ಪರಿಚಯ. ಇನ್ನೊಬ್ಬ ಆರೋಪಿ ಪರಿಚಯ ಇಲ್ಲ. ಮೃತರು ನನ್ನ ಸಂಬಂಧಿಕರು. ಪೋಲೀಸರು ಸರಕಾರಿ ಆಸ್ಪತ್ರೆಯಲ್ಲಿ ಸಹಿ ಮಾಡಿ ಅಂತಾ ಹೇಳಿದರು ನಾನು ಸಹಿ ಮಾಡಿದ್ದೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ-10 ಅಂತಾ ಗುರುತಿಸಲಾಗಿದ್ದು, ಸಹಿಯನ್ನು ನಿಪಿ-10 ಬಿ ಅಂತಾ ಗುರುತಿಸಲಾಯಿತು. ಈಗ ಇನ್ನೊಂದು ಪಂಚನಾಮೆ ನಿಪಿ-13 ನೋಡಿದೆ ಅದರ ಮೇಲಿನ ಸಹಿಯನ್ನು ನಿಪಿ-13 ಬಿ ಅಂತಾ ಗುರುತಿಸಲಾಯಿತು. ಜಾಗದಲ್ಲಿ ಎರಡು ಫೋಟೋ ತೆಗೆದಿದ್ದು ಅವುಗಳನ್ನು ನಿಪಿ-9 ಮತ್ತು 11 ಅಂತಾ ಗುರುತಿಸಲಾಗಿದೆ. ಜಾಗದಲ್ಲಿ ಎರಡು ಹೆಣಗಳನ್ನು ಮಲಗಿಸಿದ್ದರು.

<u>ಪಾಟಿಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಸ್ ಸಿ ಎಚ್ ಅವರಿಂದಃ</u>

ಪಿರ್ಯಾದಿ ಮತ್ತು ಮೃತರು ನನ್ನ ಸಂಬಂಧಿಕರು. ನಾನು ಶಾಲೆ ಕಲೆತಿಲ್ಲ. ಓದಲು ಮತ್ತು ಬರೆಯಲು ಬರುವುದಿಲ್ಲ. ಪಂಚನಾಮೆ ಬರೆಯಲು ನಾನು ಮಾಹಿತಿ ನೀಡಿಲ್ಲ. ಅದರಲ್ಲಿ ಬರೆದ ವಿಷಯ ಗೊತ್ತಿಲ್ಲ. ಪೋಲೀಸರ ವಿನಂತಿ ಮೇರೆಗೆ ನಿಪಿ-10 ಮತ್ತು 13 ರಲ್ಲಿ ಸಹಿ ಮಾಡಿದ್ದೇನೆ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಅಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

**ವಿಶೇಷ ನ್ಯಾಯಾಧೀಶರು, ಬಾಗಲಕೋಟ.**

ದಿನಾಂಕಃ 04-09-2023 ರಂದು ಸಾಕ್ಷಿಗೆ ಪುನಃ ಕರೆಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ

ಸ್ಥಳ ಪಂಚನಾಮೆ ನಂತರ ದಾಲ್ಮಿಯ ಸಿಮೆಂಟ್ ಫ್ಯಾಕ್ಟರಿಗೆ ಹೋದೆವು. ಅಲ್ಲಿ ಮಲ್ಲಪ್ಪ ಹುದ್ದಾರ, ಶಂಕರ ಗುಡದಿನ್ನಿ ಮತ್ತು ರಾಜು ಬಾಡಗಿ ಇವರ ಬಟ್ಟೆಗಳನ್ನು ಹಾಜರುಪಡಿಸಿದ್ದಾರೆ. ವಿಠ್ಠಲ ತಳಗೇರಿ ಇವರ ಹಳದಿ ಬಣ್ಣದ  ಬನಿಯನ್ ನೋಡಿ ಮು.ಮಾ-5 ಅಂತಾ ಗುರುತಿಸಲಾಯಿತು. ವಿಠ್ಠಲ ತಳಗೇರಿ ಇವರ ದೋತರ ನೋಡಿ ಮು.ಮಾ-6 ಅಂತಾ ಗುರುತಿಸಲಾಯಿತು. ಕಾಳಪ್ಪ ಮಚ್ಚಂಡಿಯ ನೀಲಿ ಅಂಗಿಯನ್ನು ಮು.ಮಾ-7 ಅಂತಾ ಗುರುತಿಸಲಾಯಿತು. ಮಲ್ಲಪ್ಪ ಈತನ ಪ್ಯಾಂಟನ್ನು ಮು.ಮಾ-8 ಅಂತಾ ಗುರುತಿಸಲಾಯಿತು. ಶಂಕರ ಗುಡದಿನ್ನಿ ಇವರ ಪ್ಯಾಂಟನ್ನು ಮು.ಮಾ-9 ಅಂತಾ ಗುರುತಿಸಲಾಯಿತು. ಕಾಡಪ್ಪ ಮುಚ್ಚಂಡಿ ಇವರ ಪ್ಯಾಂಟನ್ನು ಮು.ಮಾ-10 ಅಂತಾ ಗುರುತಿಸಲಾಯಿತು. ಮಲ್ಲಪ್ಪ ಹುದ್ದಾರ ಇವನ ಗುಲಾಬಿ ಬಣ್ಣದ ಅಂಗಿಯನ್ನು ಮು.ಮಾ-11 ಅಂತಾ ಗುರುತಿಸಲಾಯಿತು. ವಿಠ್ಠಲ ತಳಗೇರಿ ಇವನ ಟೀಶರ್ಟಅನ್ನು ಮು.ಮಾ-12 ಅಂತಾ ಗುರುತಿಸಲಾಯಿತು. ವಿಠ್ಠಲ ತಳಗೇರಿ ಇವನ ಶರ್ಟಅನ್ನು ಮು.ಮಾ-13 ಅಂತಾ ಗುರುತಿಸಲಾಯಿತು. ಮಲ್ಲಪ್ಪ ಹುದ್ದಾರ ಇವನ ಬನಿಯನ್ ಅನ್ನು ಮು.ಮಾ-14 ಅಂತಾ ಗುರುತಿಸಲಾಯಿತು. ಮಲ್ಲಪ್ಪ ತಳಗೇರಿ ಇವನ ಶರ್ಟನ್ನು ಮ್ಮೂ-15 ಅಂತಾ ಗುರುತಿಸಲಾಯಿತು. ಶಂಕರ ಗುಡದಿನ್ನಿ ಇವರ ಬನಿಯನ್ ಅನ್ನು ಮು.ಮಾ-16 ಅಂತಾ ಗುರುತಿಸಲಾಯಿತು. ವಿಠ್ಠಲ ತಳಗೇರಿ ಇವರ ಚಪ್ಪಲ ಮು.ಮಾ-17 ಅಂತಾ ಗುರುತಿಸಲಾಯಿತು. ಎರಡು ತಲವಾರಗಳನ್ನು ಮು.ಮಾ-18 ಮತ್ತು 19 ಅಂತಾ ಗುರುತಿಸಲಾಯಿತು.

ಸದರಿ ಸ್ಥಳದಲ್ಲಿ 11 ಪೋಟೋ ತೆಗೆದಿದ್ದಾರೆ. ದೋಷಾರೋಪಣಾ ಪತ್ರದಲ್ಲಿ ಕೇವಲ 2 ಪೋಟೋಗಳು ಇದ್ದು ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-34 ಮತ್ತು 35 ಅಂತಾ ಗುರುತಿಸಲಾಯಿತು. ಪೋಟೋ ತೆಗೆದಾಗ ಸಮಯ 5-30 ರಿಂದ 6-30 ಗಂಟೆಯಾಗಿತ್ತು. ನಂತರ ಠಾಣೆಗೆ ಬಂದು ಅಲ್ಲಿಂದ ಮನೆಗೆ ಬಂದೆವು.

ಪಾಟಿಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಸ್ ಸಿ ಎಚ್  ಅವರಿಂದಃ
ಪಂಚನಾಮೆಗೆ ಪೋಲೀಸರು ಕರೆಸಿದ್ದರು. ನಾನು ಊರಲ್ಲಿ ಇದ್ದಾಗ ಪೋಲೀಸರು ಕರೆಯಲು ಬಂದಿದ್ದರು. ಮೃತ ಮಳಿಯಪ್ಪ ನನ್ನ ಅಜ್ಜ. ಪೋಲೀಸರಿಗೆ ಪಂಚನಾಮೆ ಬರೆಯಲು ನಾನು ಹೇಳಿ ಬರೆಸಿಲ್ಲ.

ಠಾಣೆಯಿಂದ ಮೊದಲು ನಮಗೆ ಶಿರೋಳ ಕೊಲೆಯಾದ ಜಾಗಕ್ಕೆ ಪೋಲೀಸರು ಕರೆದುಕೊಂಡು ಹೋದರು. ಅಲ್ಲಿಂದ 11-30 ರಿಂದ 1-30 ಗಂಟೆಯವರೆಗೆ ಇದ್ದೆವು. ಜಾಗದಲ್ಲಿ ಪೋಲೀಸರಿಗೆ ಬರೆಯಲು ನಾವು ಮಾಹಿತಿ ನೀಡಿಲ್ಲ. ಪೋಲೀಸರು ಬರೆದುಕೊಂಡಿದ್ದಾರೆ ಅವರ ಹುದ್ದೆ ಗೊತ್ತಿಲ್ಲ. ಅಲ್ಲಿಂದ ಡಾಲ್ಮಿಯ ಪ್ಯಾಕ್ಟರಿಗೆ 5-30 ಗಂಟೆಗೆ ಪೋಲೀಸರು ಮತ್ತು ಪಿ ಎಸ್ ಐ ಕರೆದುಕೊಂಡು ಹೋದರು. ಅಲ್ಲಿ 6-30 ಗಂಟೆಯವರೆಗೆ ಇದ್ದೆವು. ಜಾಗದಲ್ಲಿ ಪೋಲೀಸರು ಬರೆದುಕೊಂಡರು. ಪೋಲೀಸರು ಅಲ್ಲಿ ನಿಲ್ಲಿಸಿ ಪೋಟೋ ತೆಗೆದುಕೊಂಡರು. ಪೋಟೋಗ್ರಾಪರ್ ನಮ್ಮ ಊರಿನವನು, ಅವನನ್ನು ನಮ್ಮ ಜೊತೆ ಕರೆದುಕೊಂಡು ಹೋಗಿದ್ದೆವು, ಅವನ ಹೆಸರು ನೆನಪಿಲ್ಲ. ಡಾಲ್ಮಿಯ ಪ್ಯಾಕ್ಟರಿಯಲ್ಲಿ 9 ಬಟ್ಟೆಗಳನ್ನು ಅಮಾನತುಪಡಿಸಿಕೊಂಡಿದ್ದಾರೆ. ಡಾಲ್ಮಿಯ ಪ್ಯಾಕ್ಟರಿಯಿಂದ ಪೊ.ಠಾಣೆಗೆ ಬಂದೆವು ಅಲ್ಲಿ ಪೋಲೀಸರು ನನ್ನ ಸಹಿ ಪಡೆದಿಲ್ಲ. ಪೋಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿ ಜಪ್ತ ಮಾಡಿಲ್ಲ ಎಂದರೆ ಸರಿಅಲ್ಲ. ಪಂಚನಾಮೆಯಲ್ಲಿ ಬರೆದ ವಿಷಯ ಗೊತ್ತಿಲ್ಲ. ಪಂಚನಾಮೆ ಬರೆಯಲು ಮಾಹಿತಿ ನೀಡಿಲ್ಲ. ಪಂಚನಾಮೆ ಮಾಡಿ, ಮು.ಮಾಲುಗಳನ್ನು ಜಪ್ತ ಮಾಡಿಕೊಂಡಿದ್ದಾರೆ ಅಂತಾ ಸುಳ್ಳು ಹೇಳುತ್ತೇನೆ ಎಂದರೆ ಸರಿಅಲ್ಲ. ಮೃತರು ನನ್ನ ಸಂಬಂಧಿಕರು ಇರುವುದರಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಅಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

**ವಿಶೇಷ ನ್ಯಾಯಾಧೀಶರು, ಬಾಗಲಕೋಟ.**